9. ಶಾಸನ ರಚನೆ

ಕರ್ನಾಟಕ ವೃತ್ತಿ ನಿರತ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಹಾಗೂ ಯೋಗ ವೈದ್ಯರ ನೋಂದಣಿ ಮತ್ತು ವೈದ್ಯ ವೃತ್ತಿದಾರರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ, 2007 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, 2007 ನೇ ಸಾಲಿನ ಕರ್ನಾಟಕ ವೃತ್ತಿ ನಿರತ ಆಯುರ್ವೇದ, ಪ್ರಕೃತಿ, ಚಿಕಿತ್ಸೆ, ಸಿದ್ಧ, ಯುನಾನಿ ಹಾಗು ಯೋಗ ವೈದ್ಯರ ನೋಂದಣಿ ಮತ್ತು ವೈದ್ಯ ವೃತ್ತಿದಾರರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಆರ್. ಅಶೋಕ್ :- ಸನ್ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಈಗಾಗಲೇ ಇದೆ, ಅದಕ್ಕೆ ನಾವು ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಹಿಂದೆ ಆಯುರ್ವೇದ ಹಾಗು ಸಿಸ್ಟಂನಲ್ಲಿ ಓದಿದಂತಹ ಡಾಕ್ಟರ್‌ಗಳು ರಿಜಿಸ್ಟ್ರೇಷನ್ ಮಾಡಬೇಕಾದರೆ ರೂ. 300/- ಶುಲ್ಕವನ್ನು ಕೊಟ್ಟು, ಅಜೀವ ಅಂದರೆ ಒಂದು ಬಾರಿ ಮಾತ್ರ ಅವರು ರೂ. 300/- ಕೊಡಬೇಕಾಗಿತ್ತು ಮತ್ತೆ ಪ್ರತಿ ವರ್ಷ ರೂ. 20/- ಕೊಡಬೇಕಾಗಿತ್ತು. ಅದರ ಬದಲಾಗಿ ಈಗ, ಅದನ್ನು ರೂ. 750/- ಮಾಡುವುದು, ರೂ. 20/- ಬದಲಾಗಿ 50/- ಮಾಡುವುದು. ಇದರಿಂದ ಆಯುರ್ವೇದ ಮಂಡಳಿ ಏನು ಇದೆ, ಅದಕ್ಕೆ ಒಂದು ಶಕ್ತಿ ತುಂಬುವುದಕ್ಕೆ ಉಪಯೋಗವಾಗುತ್ತದೆ ಆ ದೃಷ್ಟಿಯಿಂದ ನಾವು ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಉಪಾಧ್ಯಕ್ಷರೇ, ಇದನ್ನು ನಾವು ಓದಿದ್ದೇವೆ, ಪಾಸ್ ಮಾಡಬಹುದು.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ, 2007 ನೇ ಸಾಲಿನ ಕರ್ನಾಟಕ ವೃತ್ತಿನಿರತ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಹಾಗೂ ಯೋಗ ವೈದ್ಯರ ನೋಂದಣಿ ಮತ್ತು ವೈದ್ಯ ವೃತ್ತಿದಾರರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಉಪಾಧ್ಯಕ್ಷರು :– "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಉಪಾಧ್ಯಕ್ಷರೇ, 2007 ನೇ ಸಾಲಿನ ಕರ್ನಾಟಕ ವೃತ್ತಿ ನಿರತ ಆಯುರ್ವೇದ, ಪ್ರಕೃತಿ, ಚಿಕಿತ್ಸೆ, ಸಿದ್ಧ, ಯುನಾನಿ ಹಾಗು ಯೋಗ ವೈದ್ಯರ ನೋಂದಣಿ ಮತ್ತು ವೈದ್ಯ ವೃತ್ತಿದಾರರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ, 2007 ನೇ ಸಾಲಿನ ಕರ್ನಾಟಕ ವೃತ್ತಿನಿರತ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಹಾಗೂ ಯೋಗ ವೈದ್ಯರ ನೋಂದಣಿ ಮತ್ತು ವೈದ್ಯ ವೃತ್ತಿದಾರರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ – 4)